# ಬೇರು ಕಿತ್ತ ಬೋಳು ಮರ!

ಕೆಲವೇ ವ್ಯಕ್ತಿಗಳ ಪ್ರತಿಷ್ಠೆಯ ಪಣಕ್ಕಾಗಿ ನಡೆವ ಯುದ್ಧಗಳು ಸಾಮಾನ್ಯ ಜನರ ಬದುಕಿನ ಬೇರುಗಳನ್ನು ಹೇಗೆ ಕಿತ್ತುಹಾಕುತ್ತವೆ ಎನ್ನುವುದನ್ನು ಈ ಕಿರುಚಿತ್ರ ತೋರಿಸುತ್ತದೆ.

■ ಗೌರಿ

ಹೆಸರು: ಅಪ್‌ರೂಟೆಡ್
ನಿರ್ದೇಶನ: ಆ್ಯಂಡ್‌ರ್ಝುಜ್ ಗೇವ್ರಿಸ್
ನಿರ್ಮಾಣ: ಮಾರ್ಕ್ ಹೆಪರ್‌ಬುಷ್
ಛಾಯಾಗ್ರಹಣ: ಆಲ್ಬರ್ಟ್ ಸಲಾಸ್
ಸಂಕಲನ: ಡೇವಿಡ್ ಗ್ಯಾಸಲ್‌ಬೌರ್
ತಾರಾಗಣ: ಓಲ್ಯಾ ಶೆವ್‌ಚುಕ್, ಇವಾನ್ ಡೋರ್ನ್, ಓಲ್ಯಾ ಸ್ಟೋರೋಝುಕ್, ಅನ್ನಾ ಪೂರ್‌ಡೂಯ್

ಅವಳು ಮನೆಯಲ್ಲಿ ಬೆಚ್ಚಗೆ ಮಲಗಿದ್ದಾಳೆ. ಯಾರೋ ಮನೆಯೊಳಗೆ ಬಂದಂತೆ... ಅರೆತೆರೆದ ಬಾಗಿಲು ತೆರೆದು ರೂಮಿನೊಳಗೆ ಅಡಿಯಿಟ್ಟಂತೆ.... ಅವಳು ಬೆಚ್ಚಿ ಎಚ್ಚರಾಗುತ್ತಾಳೆ. ಥಟ್ಟನೆ ಕೇಳುವ ಗುಂಡಿನ ಮೊರೆತ... ದಿಕ್ಕೆಟ್ಟು ಹೊರಗೋಡುತ್ತಾಳೆ...

***

ಅವನು ದಿನಸಿ ತರಲೆಂದು ಅಂಗಡಿಗೆ ಬಂದಿದ್ದಾನೆ. ಮೊಬೈಲ್‌ಗೆ ಮೆಸೇಜ್ ಬಂದ ಸದ್ದಾಗುತ್ತದೆ. ತೆರೆದು ನೋಡಿದರೆ, 'ನೀನು ಸೇಫ್ ಆಗಿದ್ದೀಯಾ?' ಎಂಬ ಸಂದೇಶ. ಹುಡುಗನ ಮುಖದ ಮೇಲೆ ಭಯದ ನೆರಳು. ಅಷ್ಟರಲ್ಲಾಗಲೇ ಹೊರಗೆ ಆಂಬುಲೆನ್ಸ್ ಕೂಗಿದ ಸೈರನ್, ಅದರ ಬೆನ್ನಿಗೇ ಬಾಂಬು ಸ್ಫೋಟಿಸಿದ ಸದ್ದು... ಹುಡುಗ ಜೀವವನ್ನು ಕೈಯಲ್ಲಿ ಹಿಡಿದು, 'ಅಡಗಿಕೊಳ್ಳಿ' ಎಂದು ಕೂಗುತ್ತ ಅಡಗುತ್ತಾನೆ.

***

ಬಸ್ಸಿನಲ್ಲಿ ಅವಳು ತನ್ನ ಪುಟ್ಟ ಮಗಳೊಟ್ಟಿಗೆ ಕೂತಿದ್ದಾಳೆ. ಗಾಜಿನಾಚೆಯ ಜಗತ್ತು ಒಮ್ಮಿಂದೊಮ್ಮೆಲೇ ಬದಲಾಗುತ್ತದೆ. ನಿರ್ಮಲವಾದ ಆಕಾಶದಲ್ಲಿ ಬೆಂಕಿಯ ಕಿಡಿಗಳು... ಕಿವಿಗಡಚಿಕ್ಕುವ ಹಾಗೆ ಸಿಡಿಮದ್ದಿನ ಗದ್ದಲ... ಅವಳು ಮಗಳನ್ನು ಅವುಚಿಕೊಂಡು ಸೀಟಿನಡಿಗೆ ತೆವಳುತ್ತಾಳೆ. ಮುದ್ದು ಕಂದಮ್ಮನ ಕಣ್ಣುಗಳಲ್ಲಿ ಎಂದೂ ಕಾಣದ ಭೀತಿ... ಗುಂಡಿನ ಮೊರೆತದ ನಡುವೆಯೇ ಹೊರಹೊಮ್ಮಿನ ಆ ಕಂದಮ್ಮನ ಆಕ್ರಂದನ ಎಲ್ಲಿ ಮುಳುಗಿಹೋಯಿತು?

ಯುದ್ಧದ ಪರಿಣಾಮವನ್ನು ಬಿಂಬಿಸುವ ಕೆಲವು ಛಿದ್ರ ಚಿತ್ರಗಳು ಇವು. ಈ ಯಾವ ದೃಶ್ಯಗಳೂ ರಕ್ತಸಿಕ್ತ ದೇಹಗಳ ಮೂಲಕ, ಶಸ್ತ್ರಾಸ್ತ್ರಗಳ ಪ್ರದರ್ಶನಗಳ ಮೂಲಕ, ಪ್ರಚೋದಿತ ಭಾಷಣಗಳ ಮೂಲಕ ಯುದ್ಧದ ಭೀಕರತೆಯನ್ನು ಕಾಣಿಸುವುದಿಲ್ಲ. ಆದರೆ ದಿನದಿನದ ಬದುಕಿನಲ್ಲಿ ಮುಳುಗಿಹೋಗಿರುವ, ಸಂತೋಷ–ಸಂತಾಪಗಳಲ್ಲಿ ಬದುಕನ್ನು ಹೆಣೆದುಕೊಳ್ಳುತ್ತಿರುವ ಜನರಿಗೆ ಇಂದಿನಿಂದ ಈ ನೆಲ ನಿನಗೆ ಸುರಕ್ಷಿತವಲ್ಲ; ಇಲ್ಲಿಯೇ ಇದ್ದರೆ ಯಾವ ಕ್ಷಣದಲ್ಲಾದರೂ ನೀನು ಅನಾಥ ಹೆಣವಾಗಿಬಿಡಬಹುದು ಎಂಬ ಸೂಚನೆ ಹುಟ್ಟಿಸುವ ನಡುಕ ಎಂಥದ್ದು ಎನ್ನುವುದನ್ನು ತುಂಬ ಪ್ರಭಾವಶಾಲಿಯಾಗಿ ಕಾಣಿಸುತ್ತವೆ.

ನಿರ್ದೇಶಕ ಆ್ಯಂಡ್‌ರ್ಝುಜ್ ಗೇವ್ರಿಸ್‌ಗೆ ಈ ಕಿರುಚಿತ್ರ ನಿರ್ಮಾಣ ಮಾಡಲೇಬೇಕು ಎಂಬ ಒತ್ತಡ ಹುಟ್ಟಿಸಿದ್ದು ರಷ್ಯಾ ಮತ್ತು ಉಕ್ರೇನ್ ನಡುವೆ ಹಲವು ತಿಂಗಳುಗಳಿಂದ ನಡೆಯುತ್ತಿರುವ ಯುದ್ಧ. ಇಡೀ ಜಗತ್ತೇ ಇದಕ್ಕೆ ಸಾಕ್ಷಿಯಾಗಿದ್ದರೂ ಇದನ್ನು ಶಮನಗೊಳಿಸಲು ಸಾಧ್ಯವಾಗಿಲ್ಲ. ಅದಕ್ಕೊಂದು ಮುಕ್ತಾಯವೂ ಇನ್ನೂ ಸಿಕ್ಕಿಲ್ಲ. ರಾಷ್ಟ್ರ ರಾಷ್ಟ್ರಗಳ ನಡುವಿನ ಪ್ರತಿಷ್ಠೆಯ ಸ್ಥಾಪನೆಗಾಗಿ ನಡೆಯುತ್ತಿರುವ ಈ ಯುದ್ಧದಲ್ಲಿ ನೆಲೆ ಕಳೆದುಕೊಳ್ಳುವವರು ಸಾಮಾನ್ಯ ಜನರಲ್ಲವೇ? ಹುಟ್ಟಿ ಬೆಳೆದ ನೆಲ, ಬದುಕನ್ನು, ವ್ಯಕ್ತಿತ್ವವನ್ನೂ ರೂಪಿಸಿದ ನಾಡನ್ನು ಬಿಟ್ಟು ದಿಕ್ಕು ದೆಸೆಯಿಲ್ಲದೆ ನಿರಾಶ್ರಿತರಾದವರ ನೋವನ್ನು ಯಾವ ಮಾಪನದಲ್ಲಿ ಅಳೆಯುವುದು? ಅವರ ನೋವಿಗೆ ನಾವು ಹೇಗೆ ಜೊತೆಯಾಗಬಹುದು? ಈ ಪ್ರಶ್ನೆಯೇ ಅವರನ್ನು ಈ ಕಿರುಚಿತ್ರ ಮಾಡುವಂತೆ ಪ್ರೇರೇಪಿಸಿದೆ.

ಇದರಲ್ಲಿ ಕಾಣಿಸಿಕೊಂಡಿರುವ ಹಲವರು ಉಕ್ರೇನ್ ನಿರಾಶ್ರಿತರೇ ಆಗಿದ್ದಾರೆ. ಅವರ ಕಥೆಯನ್ನು ಅವರ ಮೂಲಕವೇ ಕಟ್ಟಿ, ಜಗತ್ತಿಗೆ ಹೇಳಹೊರಟಿರುವ ನಿರ್ದೇಶಕರು, ಈ ಎರಡು ನಿಮಿಷದ ಚಿತ್ರದ ಕೊನೆಯಲ್ಲಿ ಕಟ್ಟುವ ಮನುಷ್ಯವೃಕ್ಷದ ರೂಪಕ ಬಹುಕಾಲ ಮನಸಲ್ಲಿ ಉಳಿದುಕೊಳ್ಳುವಂಥದ್ದು. ಯುದ್ಧಗಳ ಉದ್ದೇಶ ಏನೇ ಇದ್ದರೂ, ಅದರ ಪರಿಣಾಮ ಮಾತ್ರ ಸಾಮಾನ್ಯ ಮನುಷ್ಯರ ಬೇರನ್ನು ಕತ್ತರಿಸಿ ಅನಾಥರನ್ನಾಗಿಸುವುದೇ ಅಲ್ಲವೇ ಎಂಬ ಪ್ರಶ್ನೆಯನ್ನು ಹುಟ್ಟಿಸುವಂಥದ್ದು.

ಕಿರುಚಿತ್ರ ವೀಕ್ಷಣೆಗೆ
bit.ly/3n7Vd0x
ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

